

ಅವರ ಅನುಭವಕ್ಕೆ ತಕ್ಕಂತೆ ವೇದ್ಯವಾಗುತ್ತಾ ಹೋಗುತ್ತದೆ. ಒಟ್ಟಿನಲ್ಲಿ, ವೃದ್ಧಾಪ್ಯ ಕೂಡ ಅವರ ಸೇಡಿಗೆ ಮುಪ್ಪು ತರುವುದಿಲ್ಲ. ಎವೆರಿಸ್ಟೊನನ್ನು ಕೆಣಕಲಿಕ್ಕಾಗಿಯೇ ಅವನ ಮಡದಿಯ ಚಿತ್ರಗಳನ್ನು ಅವನ ಮನೆಯ ಮುಂದೆಯೇ ಇಸಾವಿರೊ ಸುಡುತ್ತಾನೆ. ಎವೆರಿಸ್ಟೊನ ಕೋಪದ ಬೆಂಕಿ ಇಸಾವಿರೊನ ಮನೆಯನ್ನೇ ಸುಟ್ಟುಬಿಡುತ್ತದೆ. ಸಾವಿನ ಸಮ್ಮುಖದಲ್ಲೂ ಗೆಳೆಯರ ಜಗಳ ಕಗ್ಗಂಟಾಗಿಯೇ ಉಳಿಯುತ್ತದೆ.

ಸಿನಿಮಾದ ಸೌಂದರ್ಯ ಇರುವುದು ಅದರ ಕಾವ್ಯಾತ್ಮಕ ನಿರೂಪಣೆಯಲ್ಲಿ. ಇಬ್ಬರು ಗೆಳೆಯರ ಗೆಳೆತನ, ಮುನಿಸುಗಳನ್ನು ಕೆಲವೇ ದೃಶ್ಯಗಳನ್ನು ಅವರು ಹಿಡಿದಿಟ್ಟಿರುವುದು ಮೋಹಕವಾಗಿದೆ. ಝಿಕ್ರೆಲ್ ಹಿನ್ನೆಲೆಯಲ್ಲಿ ಮಾಂತ್ರಿಕ ವಾಸ್ತವವನ್ನು ಬಳಸಿಕೊಂಡಿರುವ ರೀತಿ ಮೋಹಕವಾಗಿದೆ. ಸಾವಿನ ಸಂದರ್ಭದಲ್ಲಿ ಈಗಾಗಲೇ ಮೃತ್ಯುಲೋಕಕ್ಕೆ ಸಂದ ಪೂರ್ವಸೂರಿಗಳು ಬಂದು ಸಾವಿಗೊಳಗಾಗುವ ವ್ಯಕ್ತಿಯನ್ನು ಕರೆದೊಯ್ಯುವ ದೃಶ್ಯ ಸಾವನ್ನೇ ಮೋಹಿಸುವಷ್ಟು ಚೆಲುವಾಗಿದೆ. ಪಾತ್ರಧಾರಿಗಳು ಕೂಡ ಸಿನಿಮಾದ ಕಥೆಯಲ್ಲಿ ಸೇರಿಹೋಗಿದ್ದಾರೆ. ಇಸಾವುರೊ ಪಾತ್ರದಲ್ಲಿ ಜೋಸ್ ಮ್ಯಾನ್ಯುಯೆಲ್ ಪೊನ್ಸಿಲಿಸ್, ಇವಾರಿಸ್ಟೊ ಪಾತ್ರದಲ್ಲಿ ಎಲಿಜಿಯೊ ಮೆಲೆಂಡೆಜ್, ಮಾರ್ಟಿನ್ ಫರ್ನಾಂಡೊ ಅಲ್ವರೆಜ್ ರೆಬಿಯಲ್ ಹಾಗೂ ಲುವಿಯಾ ಎನ್ನುವ ಅಜ್ಜನ ಮೊಮ್ಮಗಳ ಪಾತ್ರದಲ್ಲಿನ ಫಾತಿಮಾ ಮೊಲಿನಾ – ಇವರೆಲ್ಲ ಝಿಕ್ರೆಲ್ ಕನಸಿಗೆ ಓಗೊಟ್ಟವರಂತೆ ತಮ್ಮ ಪಾತ್ರಗಳನ್ನು ಅನುಭವಿಸಿದ್ದಾರೆ.

ನಿರ್ದೇಶಕ ಎರ್ನೆಸ್ಟೊ ಅವರ ಸೋದರ ಕಾರ್ಲೊಸ್ ಕಾಂಟ್ರೆಯಾಸ್ ಚಿತ್ರದ ಕಥೆಯನ್ನು ಹೆಣೆದಿದ್ದಾರೆ. ಈ ಸೋದರರ ಅಜ್ಜಿ ಮಾತನಾಡುತ್ತಿದ್ದ ಜಪೊತೆಕೊ (Zapoteco) ಎನ್ನುವ ಭಾಷೆಯೇ ಈ ಕಥೆಗೆ ಪ್ರೇರಣೆಯಂತೆ. ಎರ್ನೆಸ್ಟೊ ಹಾಗೂ ಕಾರ್ಲೊಸ್ ನಮ್ಮ ಮನಸ್ಸಿನ ಮೂಲೆಯ ಯಾವುದೋ ಆತಂಕವನ್ನು ತಮ್ಮದಾಗಿಸಿಕೊಂಡಂತೆ ಸಿನಿಮಾ ಮಾಡಿದ್ದಾರೆ.

ಭಾಷೆಯೊಂದು ಉಳಿಯಲು ಅಥವಾ ಅದನ್ನು ಉಳಿಸಿಕೊಳ್ಳಲು ನಾವು ಏನು ಮಾಡಬೇಕು ಎನ್ನುವ ಪ್ರಶ್ನೆ ಸಿನಿಮಾ ನೋಡಿದ ನಂತರ ಮತ್ತೆ ಮತ್ತೆ ಕಾಡುತ್ತದೆ. ಭಾಷೆಯನ್ನು ಚಾಲ್ತಿಯಲ್ಲಿಡುವುದು, ವ್ಯವಹಾರದ ನುಡಿಯಾಗಿ ಬಳಸುವುದು, ಗಳಿಕೆಯ–ಜ್ಞಾನದ ಮಾರ್ಗವನ್ನಾಗಿಸುವುದು – ಹೀಗೆ ಹಲವು ಉತ್ತರಗಳನ್ನು ನೀಡಬಹುದು. ಆದರೆ, ಇದೆಲ್ಲಕ್ಕೂ ಮುಖ್ಯವಾದುದು ಅಂತಃಕರಣ. ಭಾಷೆ ಸಾಯುವುದೆಂದರೆ ನಮ್ಮ ಅಂತಃಕರಣ ಸಾಯುವುದು ಎನ್ನುವುದನ್ನೇ ಎರ್ನೆಸ್ಟೊರ 'ಐ ಡ್ರೀಮ್ ಇನ್ ಅನದರ್ ಲಾಂಗ್ವೇಜ್' ಬೇರೆ ಬೇರೆ ಧ್ವನಿಗಳಲ್ಲಿ ಹೇಳುತ್ತಿದೆ ಎನ್ನಿಸುತ್ತದೆ.

❀